ಹಿಟ್ಟು, ಬೆಲ್ಲ, ಎಳ್ಳು, ಕಡ್ಲೆ, ಶೇಂಗಾದಿಂದ ತಯಾರಿಸಿರುತ್ತಾರೆ. ಈ ಹಬ್ಬವನ್ನು ಮಕ್ಕಳೆಲ್ಲರೂ 'ತಂಬಿಟ್ಟಬ್ಬ' ಎಂದೇ ಕರೆಯುತ್ತಾರೆ. ತಂಬಿಟ್ಟನ್ನು ನೈವೇದ್ಯವಾಗಿ ಮಾರಮ್ಮಂಗೆ ಅರ್ಪಿಸಿ ಬಂದ ನಂತರ ನೆಂಟರಿಷ್ಟರೆಲ್ಲರೂ ಉಂಡು ಮಲಗುತ್ತಾರೆ. ಮಾರನೇ ದಿನ ಶಿವರಾತ್ರಿ ಉಪವಾಸ. ಮಧ್ಯಾಹ್ನದ ಊಟಕ್ಕೆ ಬೆಳಗ್ಗೆಯದ್ದನ್ನೂ ಸೇರಿಸಿ ತಿಂದು ಅದೇ ತಂಗಳದಲ್ಲೊಂದಷ್ಟು ರಾತ್ರಿ ತಿಂದು ಕೇರಿಯ ಮಧ್ಯಭಾಗದ ಲೈಟಿನ ಕಂಬದ ಬಳಿ ಬರುತ್ತಾರೆ. ಜಾಗರಣೆ ಮಾಡಲು. ಹೀಗೆ ಜಾಗರಣೆ ಇರಲೆಂದೇ ಮನೆ ಮನೆಗೆ ದುಡ್ಡೆತ್ತಿ ವಿಸಿಪಿ ಹಾಕಿಸುತ್ತಾರೆ. ಹಳೆ ಕಾಲದ ಎರಡು ಸಿನಿಮಾ. ಹೊಸ ಕಾಲದ ಎರಡು ಸಿನಿಮಾ ನೋಡುವಷ್ಟರಲ್ಲಿ ಬೆಳಗಾಗಿರುತ್ತದೆ. ಅಲ್ಲಿಗೆ ಶಿವರಾತ್ರಿ ಮುಗಿದಿರುತ್ತದೆ.

ಹೀಗೆ ಅಂದು ಹಬ್ಬ ಮುಗಿದು ಕೇರಿಯ ನೊಣವೂ ಸಹ ಲೈಟ್‌ಕಂಬದ ಬಳಿ ನೆರೆದು ರಾಜ್‌ಕುಮಾರ್ ನಟಿಸಿರುವ 'ಸಂಪತ್ತಿಗೆ ಸವಾಲ್' ನೋಡುತ್ತಿರಲು, ನೀಲವ್ವನಿಗೆ ಬೆಳಗ್ಗಿಂದ ಕೆಲಸ ಮಾಡಿ ನಿದ್ದೆ ಬಂದು ತೂಗುತ್ತಿರಲು, ಮಲ್ಲಣ್ಣ 'ಅಮ್ಮೀ ಮಲಗಂಗಿದ್ರೆ ಮನೆಗೋಗಮ್ಮಿ' ಎಂದ ಮಾತು ಕೇಳಿದೊಡನೆ ನೀಲವ್ವ ಚಂದ್ರನಿಗೆ ತಡಕಾಡಿ ಮನೆ ಕಡೆ ಒಬ್ಬಳೇ ಹೆಜ್ಜೆ ಹಾಕಿದಳು. ಸೆರಗಿಗೆ ಗಂಟಿಕ್ಕಿಕೊಂಡಿದ್ದ ಬೀಗದ ಕೈಗಳು ಟಣ್ ಟಣ್ ಅಂತ ಒಂದಕ್ಕೊಂದು ಹೊಡಕೊಂಡು ಸದ್ದು ಮಾಡುತ್ತಿದ್ದವು. ದೂರದಿಂದ ಬೊಗಳುತ್ತಿದ್ದ ನಾಯಿಗಳು ಹತ್ತಿರ ಬಂದು ಮೂಸಿ ಸುಮ್ಮನಾಗುತ್ತಿದ್ದವು. ಮನೆಯ ಬಾಗಿಲು ತೆರೆದು ಚಾಪೆ ಹಾಸಿ ಮಲಗಿ ಕ್ಷಣವಾಗಿರಲಿಲ್ಲ ಬಾಗಿಲು ಬಡಿಯಿತು. ನೀಲವ್ವ ಎದ್ದು ನಕ್ಕು 'ಅಸಿಸಿ ಹಿಂದ್ಗಡ್ಲೆ ಬಂದ್ಬುಟ್ಯಾ? ನೆರೆ ಕೂದ್ಲು ಬಂದ್ರು ಸರಸ ಮಾತ್ರ ನೆರೀಲಿಲ್ಲ' ಎಂದು ಬಾಗಿಲು ತೆರೆದು ಅವಾಕ್ಕಾದಳು. ದಡೂತಿ ದೇಹ, ಸೆಂಟ್ ವಾಸನೆ, ಬಿಳಿ ರೇಷಿಮೆ ಅಂಗಿ ಹೊಳೆಯುತ್ತಿತ್ತು. ಬಂದಿರುವುದು ಸಾಹುಕಾರ್ ಬಸಪ್ಪ ಎಂದು ಅರಿಯುವಷ್ಟರಲ್ಲಿ ಅವನ ಹಿಂದಿದ್ದ ಆಕೃತಿ ಬಾಯಿಗೆ ಬಟ್ಟೆ ತುರುಕಿ, ಮುಖಕ್ಕೆ ಬಟ್ಟೆ ಕವುಚಿ ಎಳೆದೊಯ್ಯುತ್ತಿತ್ತು. ನೀಲವ್ವ ಹೆಚ್ಚು ಒದರಾಡಲು ಆರು ಕೈಗಳು ಅವಳನ್ನ ತಬ್ಬಿ ಮಿಸುಕಾಡದಂತೆ ಮಾಡಿದವು. ಅವಳು ಪ್ರಜ್ಞೆ ತಪ್ಪಿದ್ದು ಇಂದಿಗೂ ಅವಳಿಗೆ ತಿಳಿದಿಲ್ಲ. ಡಾಕ್ಟರ್ ಹೇಳುವಂತೆ ನಮ್ಮ ಮಾತು ಕೇಳುತ್ತದೆ ಆದರೆ ಅವಳಿಗೆ ಮಾತನಾಡಲಾಗುವುದಿಲ್ಲ. ಆಂಗಿಕ ಪ್ರತಿಕ್ರಿಯೆ ಇರುವುದಿಲ್ಲ. ಅಂದು ಜಗತ್ತಿನೊಂದಿಗೆ ಮಾತು ಬಿಟ್ಟ ನೀಲವ್ವ ಇಂದಿಗೂ ಒಂದು ಮಾತೂ ಆಡಿಲ್ಲ.

ಸಾಹುಕಾರ್ ಬಸಪ್ಪ ಎಂಟೂರ ಗೌಡರ ಕುಟುಂಬದವನು. ತೀರ ಇತ್ತೀಚಿನವರೆಗೂ ಪಂಚಾಯ್ತಿ ಅಧ್ಯಕ್ಷನಾಗಿದ್ದ. ಕಳೆದ ಒಂದೆರಡು ಸಲದಿಂದ ಮೀಸಲಾತಿ ಪರಿಣಾಮ ಅಧ್ಯಕ್ಷಗಿರಿ ಕಳೆದುಕೊಂಡಿದ್ದನಾದರೂ ಅಧಿಕಾರ ಕಳೆದುಕೊಂಡಿರಲಿಲ್ಲ. ಊರಿಗೆ ಬಂದಿದ್ದ ಆಸ್ಪತ್ರೆ, ಹೈಸ್ಕೂಲು, ಬ್ಯಾಂಕನ್ನು ತನ್ನ ಪ್ರಭಾವದಿಂದ ಕಾಲಿಡದಂತೆ ಮಾಡಿದ್ದ. ಇದ್ದ ಶಾಲೆಯನ್ನು ಸರ್ಕಾರವೇ ಮುಚ್ಚಿಸಿಬಿಡಲು ತನ್ನಪ್ಪನ ಹೆಸರಿನ ಖಾಸಗಿ ಶಾಲೆಯೊಂದನ್ನು ತೆರೆದಿದ್ದ. ಕೇರಿ, ಹಟ್ಟಿಯವರ ಜಮೀನುಗಳು ಅವರದ್ದೇ ಹೆಸರಿನಲ್ಲಿದ್ದರೂ ಸಾಹುಕಾರ್ ಬಸಪ್ಪನ ಸಾಲ ಮತ್ತು ಅಪ್ಪಣೆಯಿಲ್ಲದೆ ಉಳುವಂತಿರಲಿಲ್ಲ. ಇತ್ತೀಚೆಗೆ ದಿನದಿಂದ ದಿನಕ್ಕೆ ಸಾಹುಕಾರ್ ಬಸಪ್ಪನ ಜಮೀನಿನಲ್ಲಿ ಹೆಣ್ಣಾಳುಗಳು ಕಡಿಮೆಯಾಗುತ್ತಿರುವ ಸುದ್ದಿ ಊರೆಲ್ಲಾ ಹರಡಿತ್ತಾದರೂ ಅದಕ್ಕೆ ವಗ್ಗರಣೆ ಹಾಕುವ ಧೈರ್ಯ ಯಾರಿಗೂ ಇರಲಿಲ್ಲ. ಇಂತಿಪ್ಪ ಸಾಹುಕಾರ್ ಬಸಪ್ಪ ಪ್ರತಿ ವರ್ಷದ ಜಾತ್ರೆಗೆ ಅನ್ನ ಸಂತರ್ಪಣೆಯನ್ನೂ, ದೇಗುಲಕ್ಕೆ ದಾನವನ್ನೂ ಮರೆಯುತ್ತಿರಲಿಲ್ಲ. ಈಗೀಗ ಸಾಮೂಹಿಕ ಮದುವೆಯೆಂದು ಬೇರೆ ಸುರುಹಚ್ಚಿಕೊಂಡಿದ್ದಾನೆ.

ಅಂದು ಸಾಹುಕಾರ್ ಬಸಪ್ಪ ಊರ ಮುಂದಲ ಶೆಟ್ಟಿಯ ಅಂಗಡಿಯಲ್ಲಿ ಕುಳಿತಿದ್ದಾಗ ಟ್ರ್ಯಾಕ್ಟರ್ ತುಂಬಾ ಮಾವಿನ ಗಿಡಗಳು ಹೊರಟಿದ್ದನ್ನು ನೋಡಿ ಕೂಗು ಹಾಕಿ ಯಾರದೆಂದು ಕೇಳಲು ಕೇರಿ ಮಲ್ಲಣ್ಣನದ್ದೆಂದು ತಿಳಿಯಿತು. ತುಂಡು ಭೂಮಿ ಇಟ್ಕಂಡು ಮಾವು ಹಾಕಂಗಾದ್ನಾ ಅಂತ ಮನಸಲ್ಲೇ